ನನ್ನ ಎದುರಿಗೆ ಕುರ್ಚಿ ಹಾಕಿಕೊಂಡು ಎದುರುಬದರು ಕುಳಿತುಕೊಂಡು ತಮ್ಮದೇ ಮಕ್ಕಳನ್ನು ಮಾತಾಡಿಸುವ ಹಾಗೆ ಮುದ್ದಿನಿಂದ ಗಂಟೆಗಳ ತನಕ ನನ್ನನ್ನು ಮಾತಾಡಿಸುತ್ತಾರೆ. ನನ್ನನ್ನು ಖುಷಿಪಡಿಸಲು ಏನೆಲ್ಲ ಪ್ರಯತ್ನಿಸುತ್ತಾರೆ...! ಈ ನಡುವೆ ನನ್ನ ಕಿವಿಗೆ ಗುಡ್ ಮಾರ್ನಿಂಗ್, ಗುಡ್ ಆಫ್ಟರ್‌ನೂನ್, ಗುಡ್‌ನೈಟ್ ಮುಂತಾದ ಶಬ್ದಗಳೂ ಬೀಳುತ್ತವೆ. ನಾನೂ ಕೂಡ ಅವುಗಳ ಅನುಕರಣೆ ಮಾಡಲು ಪ್ರಯತ್ನಿಸುತ್ತೇನೆ. ಆಗಾಗ ಸುದೇಶ್ ಬಾಬು ನನ್ನದೇ ಸ್ವರವನ್ನು ನಕಲು ಮಾಡುವ ಹಾಗೆ '...ಊಟ ಆಯ್ತಾ ಮಗು... ನೋಡು, ನಿನಗಾಗಿ ನಾನು ಏನೇನ್ ತಂದಿದ್ದೇನೆ ಅಂತ... ಈ ಕಾಶ್ಮೀರಿ ಸೇಬು, ಕಾಬೂಲು ಕಡಲೆ... ಹಾಂ... ಈ ಹಸಿರು ಕ್ಯಾಪ್ಸಿಕಾಮ್... ತಿನ್ನು ಚಿನ್ನಾ. ಆರೋಗ್ಯಕ್ಕೆ ಬಹಾಳ ಒಳ್ಳೇದು...' ಎನ್ನುತ್ತಲೇ ಅವರ ನಾಲಗೆ ತಡವರಿಸಲಾರಂಭಿಸುತ್ತದೆ. ಕಣ್ಣಾಲಿಗಳು ತುಂಬಿಬಂದ ಹಾಗೆ ಕಾಣಿಸುತ್ತವೆ. ನನಗೂ ಅವರ ಅಂತರಾಳದ ಹೊಯ್ದಾಟ ಅರ್ಥವಾಗುತ್ತದೆ. ತಮ್ಮ ಇಬ್ಬರು ಮಕ್ಕಳ ಬಾಲ್ಯದ ನೆನಪು ಅವರನ್ನು ಬೇರೆಯೇ ಲೋಕಕ್ಕೆ ಕರೆದೊಯ್ಯುತ್ತದೆ. ಆಗೆಲ್ಲ ಪತ್ನಿ ಬಂದು ಅವರನ್ನು ಸಂಭಾಳಿಸುತ್ತಾಳೆ. ಹಾಗೆ ಮಾಡುತ್ತಲೇ ಸೆರಗನ್ನು ಬಾಯಿಯೊಳಗೆ ತುರುಕಿಕೊಂಡು ಒಳಗೊಳಗೆ ಬಿಕ್ಕಳಿಸುತ್ತಾಳೆ... ಎಲ್ಲವೂ ಅರ್ಥವಾಗುತ್ತದೆ.

ಟಿಯಾ ತನ್ನ ತಲೆಯನ್ನು ಮತ್ತೊಮ್ಮೆ ಝಾಡಿಸಿತು. ಅದು ತನಗೆ ತಾನೇ ಯೋಚಿಸಿತು. ...ಅಲ್ಲಾ ಯಾಕೆ ಇಷ್ಟೊಂದು ಆತ್ಮೀಯತೆ... ಸೆಳೆತ...? ಮನುಷ್ಯ ಸಂಬಂಧಗಳೇ ಗ್ಯಾರಂಟಿ ಇಲ್ಲ ಅಂದಮೇಲೆ ಇವರಿಗೆ ನಮ್ಮ ಸಂಬಂಧ ಯಾವ ಲೆಕ್ಕ...?


ಓಹ್...! ಹೀಗೆ ಯೋಚಿಸುತ್ತಾ ಕೂರಲು ಸಮಯವಿಲ್ಲ. ಅದು ಮತ್ತೊಮ್ಮೆ ರೆಕ್ಕೆ ಬಡಿದು ದೀರ್ಘ ಉಸಿರೆಳೆದುಕೊಂಡು ಆಗಸವನ್ನು ದಿಟ್ಟಿಸಿ ನೋಡಿತು. ತಕ್ಷಣವೇ ಗಾಳಿಯನ್ನು ಸೀಳುತ್ತ ಹಾರಿಹೋಗಿ ಎದುರಿನ ಮರದ ರೆಂಬೆಯ ಮೇಲೆ ಕುಳಿತಿತು.

ಇದ್ದಕ್ಕಿದ್ದ ಹಾಗೆ ಅವರಿಬ್ಬರ ದೃಷ್ಟಿ ಟಿಯಾನ ಮೇಲೆ ಬಿತ್ತು. ಟಿಯಾನನ್ನು ಗುರುತಿಸಿದ ಅವರು ಗಾಬರಿಯಿಂದ ಅವಕ್ಕಾದರು... 'ಅರೇ., ಇದೇನಾಯಿತು? ನಿಜವಾಗಿಯೂ ಟಿಯಾ ನಮ್ಮನ್ನು ಬಿಟ್ಟು ಹೋಗುತ್ತಿದೆ.'

ಇಬ್ಬರ ಕೈಕಾಲುಗಳು ನಡುಗಲಾರಂಭಿಸದವು. ಅದರಿಂದ ಬೇರೆಯಾಗುವುದನ್ನು ಕಲ್ಪಿಸಿಕೊಂಡು ಕಂಗಾಲಾದರು. ಹೀಗೆ ಟಿಯಾ ನಮ್ಮ ಸಂಬಂಧವನ್ನು ಕಡಿದುಕೊಂಡು ಹಾರಿಹೋಗುವುದನ್ನು ಕಲ್ಪಿಸಿಕೊಳ್ಳಲು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ. ಇಬ್ಬರೂ ಆರ್ತ, ಅಸಹಾಯಕ ದೃಷ್ಟಿಯಿಂದ ಒಮ್ಮೆ ಖಾಲಿ ಪಂಜರ... ಮತ್ತೊಮ್ಮೆ ಮರದ ಮೇಲೆ ಕುಳಿತಿದ್ದ ಟಿಯಾನ ಕಡೆಗೆ ನೋಡತೊಡಗಿದರು. ಇತ್ತೀಚೆಗಷ್ಟೆ ಅವರ ಸ್ನೇಹಿತನೊಬ್ಬ ಮಾತುಕತೆ ಸಂದರ್ಭದಲ್ಲಿ '...ಈ ಹಕ್ಕಿಗಳು ಕೃತಜ್ಞತೆಯನ್ನು ಉಳಿಸಿಕೊಳ್ಳುವುದಿಲ್ಲ. ಅದರಲ್ಲೂ ಗಿಳಿಯಂತೂ ಬಹಳ ಕೃತಘ್ನ...' ಎಂದು ಹೇಳಿದ್ದ ಮಾತು ಈಗ ನೆನಪಿಗೆ ಬಂತು. ಆಗ ಸುದೇಶ್ ಬಾಬೂಗೆ ಕೆಂಡದಂಥ ಕೋಪ ಬಂದಿತ್ತು.

'...ಹೋಗು... ಹೋಗು... ನೀನೂ ಹೋಗು. ಒಡಲ ಸಂಬಂಧವೇ ನಮ್ಮನ್ನು ಮರೆತಿರುವಾಗ ಇನ್ನು ನಿನ್ನದ್ಯಾವ ಲೆಕ್ಕ...! ನಡೀರಿ ಒಳಗೆ, ಇನ್ನು ಇದು ತಿರುಗಿ ಬರುವ ಮಾತೇ ಇಲ್ಲಾ...' ಎನ್ನುತ್ತ ಸುದೇಶ್‌ಬಾಬು ಪತ್ನಿ ಹೇಳುತ್ತ ಬಿಕ್ಕಳಿಸುತ್ತ ಒಳಕ್ಕೆ ನಡೆದಳು.

ಸುದೇಶ್‌ಬಾಬು ಅಲ್ಲೇ ನಿಂತು ಟಿಯಾನನ್ನು ದಿಟ್ಟಿಸಿ ನೋಡಲಾರಂಭಿಸಿದರು. ನೋಡುತ್ತಲೇ ತಾವು ಚಿಕ್ಕಂದಿನಲ್ಲಿ ಓದಿದ್ದ ಕಥೆಯೊಂದು ನೆನಪಿಗೆ ಬಂತು. ಅದರಲ್ಲಿ 'ತೋತಾರಾಮ' ಎಂಬ ಗಿಳಿ ಇತ್ತು. ಒಂದು ದಿನ ಪಂಜರದ ಬಾಗಿಲು ತೆರೆದದ್ದನ್ನು ನೋಡಿದ ತಕ್ಷಣ ಆ ತೋತಾರಾಮ ಗಿಳಿ ಹೊರಗೆ ಬಂದು ಹಾರಿಹೋಗಿ ಮರದ ಮೇಲೆ ಕುಳಿತಿತು. ಮನೆಯ ಮಾಲೀಕ ಗಿಳಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ. ಮರದ ಮೇಲೆ



ಕುಳಿತ ಗಿಳಿಯನ್ನು ನೋಡಿದ ಆತ ಕೆಳಗೆ ಖಾಲಿ ಪಂಜರ ಹಿಡಿದುಕೊಂಡು ತೋತಾರಾಮನನ್ನು ಪಂಜರದೊಳಕ್ಕೆ ಬರುವಂತೆ ಪರಿಪರಿಯಾಗಿ ಅಂಗಲಾಚಲಾರಂಭಿಸಿದ. ಆ ಗಿಳಿ ಈ ಮರದಿಂದ ಆ ಮರಕ್ಕೆ ಅದರಿಂದ ಇದಕ್ಕೆ ಹಾರಾಡುತ್ತಲೇ ಇತ್ತು. ಕೆಳಗಡೆ ದೇವರ ನಾಮಸ್ಮರಣೆ ಮಾಡುತ್ತ ಮಾಲೀಕ ಓಡಾಡುತ್ತಲೇ ಇದ್ದ...

ಈ ಹೊತ್ತಿನಲ್ಲಿ ಸುದೇಶ್‌ಬಾಬು ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ. ಎರಡೂ ಮಂಡಿಗಳಲ್ಲಿ ಅಸಾಧ್ಯವಾದ ವೇದನೆ ಇತ್ತು. ಹಾಂ, ಸ್ವಲ್ಪಹೊತ್ತು ಪ್ರೀತಿಯಿಂದ ಟಿಯಾನನ್ನು ಮರಳಿ ಬರುವಂತೆ ಕರೆದರು. ಗಿಳಿ ಬರುವ ಯಾವ ಲಕ್ಷಣವೂ ಕಾಣದಾದಾಗ ಭಾರವಾದ ಹೃದಯದಿಂದ ನಿಧಾನವಾಗಿ ಒಳಗೆ ಬಂದು ಹಾಸಿಗೆಯ ಮೇಲೆ ಉರುಳಿಕೊಂಡು ಯೋಚಿಸಲಾರಂಭಿಸಿದರು. ಇನ್ನು ಟಿಯಾನೊಂದಿಗೆ ಮಾತಾಡುವುದು, ನಮಸ್ತೆ, ಗುಡ್‌ಮಾರ್ನಿಂಗ್ ಮುಂತಾದ ಶಬ್ದಗಳನ್ನು ಕಲಿಸುವುದು, ಪ್ರೀತಿಸುವುದು... ಯಾವುದೂ ಇರುವುದಿಲ್ಲ. ನಾಳೆಯಿಂದ ದಿನಚರಿಯೇ ಬದಲಾಗಿಬಿಡುತ್ತದೆ.

ಅರ್ಧಗಂಟೆಯೂ ಕಳೆದಿರಲಿಲ್ಲ, ಸುದೇಶ್‌ಬಾಬು ದಿಗ್ಗನೆ ಎದ್ದು ಕುಳಿತರು. ಸಮಸ್ತ ಇಂದ್ರಿಯಗಳನ್ನು ಒಂದಾಗಿಸಿ ಕೇಳಿಸಿಕೊಂಡರು. ಕಣ್ಣುಮುಚ್ಚಿಕೊಂಡು ಆಲಿಸಿಕೊಂಡರು... 'ಅರೇ, ಇದು ಟಿಯಾನದ್ದೇ ಧ್ವನಿ...'

ತಕ್ಷಣ ಪತ್ನಿಯನ್ನು ಕರೆದು ಗಮನವಿಟ್ಟು ಕೇಳಿಸಿಕೊಳ್ಳಲು ಹೇಳಿದರು. ...ಹೌದು...ಹೌದು... ಇದು ಟಿಯಾನೆ... ಬಾಗಿಲ ಬಳಿಯೇ ಸ್ವರ ಕೇಳಿಸುತ್ತಿದೆ... ಒಂದು ವೇಳೆ ವಯಸ್ಸಿನ ಅಡೆತಡೆ ಇಲ್ಲದೇ ಹೋಗಿದ್ದಿದ್ದರೆ ಆಕೆ ಚಪ್ಪಾಳೆ ತಟ್ಟುತ್ತ ಕುಣಿದು ಕುಪ್ಪಳಿಸಿ ಬಿಡುತ್ತಿದ್ದಳೋ ಏನೋ. ಅಷ್ಟೊಂದು ಖುಷಿಯಾಗಿತ್ತು ಆಕೆಗೆ. ಸುದೇಶ್ ಬಾಬು ಕೂಡ ಹರ್ಷಾತಿರೇಕದಿಂದ ನೆಗೆದು ನಿಂತುಕೊಂಡುಬಿಟ್ಟರು. ಮಂಡಿನೋವನ್ನು ಲೆಕ್ಕಿಸದೆ ಬಾಗಿಲ ಬಳಿಗೆ ಓಡಿದರು.

ಬಾಗಿಲು ತೆರೆದುನೋಡಿದರೆ ಅವರಿಗೆ ನಂಬಿಕೆಯೇ ಬರಲಿಲ್ಲ... ಬಾಗಿಲ ಪಕ್ಕದಲ್ಲಿಯೇ ಕಟ್ಟಿದ್ದ ಒಂದು ತಂತಿಯ ಮೇಲೆ ಕುಳಿತು ಟಿಯಾ ತನ್ನ ಮಾಮೂಲಿ ಸ್ವರಕ್ಕಿಂತಲೂ ಭಿನ್ನವಾಗಿ ತುಸು ಹೆಚ್ಚಾದ ಪ್ರೀತಿ, ಆತ್ಮೀಯತೆಯಿಂದಲೇ ಇಬ್ಬರಿಗೂ ತನ್ನ ಗಿಳಿಭಾಷೆಯಲ್ಲಿ ಕುತ್ತಿಗೆಯನ್ನು ಮೇಲೆ ಕೆಳಗೆ ಮಾಡುತ್ತ ಕಣ್ಣನ್ನು ಹೊರಳಿಸುತ್ತ ಏನೋ ಹೇಳುತ್ತಿತ್ತು. ಟಿಯಾನನ್ನು ನೋಡಿದ ಇಬ್ಬರ ಶರೀರದಲ್ಲಿ ಮಿಂಚಿನ ಸಂಚಾರವಾಗಿ ನಡುಗಲಾರಂಭಿಸಿದರು. ಇಬ್ಬರ ನಾಲಿಗೆ ಹಿಂದಕ್ಕೆ ಸರಿದು ಕಿರುನಾಲಿಗೆಗೆ ಅಂಟಿಕೊಂಡಿತು. ಮಾತೇ ಹೊರಡದಂತಾಗಿ ಇಬ್ಬರೂ ಟಿಯಾನನ್ನೇ ದಿಟ್ಟಿಸಿ ನೋಡುತ್ತ ಟಿಯಾ ವಾಪಸ್ಸು ಬಂದಿದ್ದಾನೆಯೋ ಇಲ್ಲವೋ ಎಂಬುದನ್ನು ಖಾತ್ರಿ ಪಡಿಸಿಕೊಳ್ಳತೊಡಗಿದರು.

ಹೀಗೇ... ಕ್ಷಣಹೊತ್ತು ಕಳೆದು ಇನ್ನೇನು ಸುದೇಶ್ ಬಾಬು ಟಿಯಾನನ್ನು ಕರೆಯಬೇಕೆನ್ನುವಷ್ಟರಲ್ಲಿ ಟಿಯಾನೇ ಹಾರಿಬಂದು ಅವರ ಹೆಗಲ ಮೇಲೆ ಕುಳಿತುಕೊಂಡಿತು. ತನ್ನ ಗುಂಡುಗುಂಡಾದ ಕಣ್ಣು, ಕುತ್ತಿಗೆಯನ್ನು ತಿರುಗಿಸುತ್ತ ಏನೋ ಹೇಳುತ್ತಿರುವಂತೆ ಅವರಿಬ್ಬರನ್ನು ಪದೇಪದೇ ನೋಡುತ್ತಿತ್ತು. ಪಕ್ಕದಲ್ಲೇ ನಿಂತಿದ್ದ ಪತ್ನಿ '...ಹಾಂ... ಹಾಂ... ಮಗು, ನೀನು ನಮ್ಮನ್ನು ಬಿಟ್ಟುಹೋಗುವುದಿಲ್ಲ ಎಂದು ನಮಗೆ ಗೊತ್ತಿತ್ತು...' ಎನ್ನುತ್ತ ಬಾಬುರವರ ಭುಜಕ್ಕೆ ತಲೆ ಆನಿಸಿ ಬಿಕ್ಕಳಿಸಲಾರಂಭಿಸಿದಳು.

ಆಗ ಟಿಯಾ ಕುಪ್ಪಳಿಸಿ ಆಕೆಯ ಭುಜದ ಮೇಲೆ ಕುಳಿತು ಆಕೆಯ ಮುಖದ ಹತ್ತಿರ ತಲೆ ತಿರುಗಿಸಿ ಏನೋ ಹೇಳುವ ಹಾಗೆ ಕೊಕ್ಕನ್ನು ಅಲ್ಲಾಡಿಸಲಾರಂಭಿಸಿತು. ಆಕೆಯ ದುಃಖದ ಕಟ್ಟೆ ಒಡೆಯಿತು... ಇಬ್ಬರೂ ಟಿಯಾನನ್ನು ತಮ್ಮ ಬೊಗಸೆಯೊಳಗೆ ತುಂಬಿಕೊಂಡು ಎಡೆಬಿಡದೆ ಚುಂಬಿಸಲಾರಂಭಿಸಿದರು.

ಪ್ರತಿಕ್ರಿಯಿಸಿ: feedback@sudha.co.in